# ಸಮಗ್ರ ಶಿಕ್ಷಣ ಕರ್ನಾಟಕ

ರಾಜ್ಯ ಯೋಜನಾ ನಿರ್ದೇಶಕರು ಕಛೇರಿ, ಹೊಸ ಸಾರ್ವಜನಿಕ ಕಛೇರಿ
ಪೂರಕ ಕಟ್ಟಡಗಳು ಕೆ.ಆರ್.ಸರ್ಕಲ್, ನೃಪತುಂಗ ರಸ್ತೆ, ಬೆಂಗಳೂರು-560001

ಸಂಖ್ಯೆ: ಸಶಿಕ/ಆಕ್ಸೆಸ್/ಶಾಲಾನುದಾನ/2020-21 ದಿನಾಂಕ: 15-12-2020

## ಜ್ಞಾಪನ

**ವಿಷಯ:** 2020-21ನೇ ಸಾಲಿನಲ್ಲಿ ಪ್ರಾಥಮಿಕ ಮತ್ತು ಪ್ರೌಢಶಾಲೆಗಳಿಗೆ ಶಿಕ್ಷಣ ಕಾಯ್ದೆ ಪ್ರಕಾರ ಒಂದೇ ಡೈಸ್ ಸಂಖ್ಯೆ ಹೊಂದಿದ್ದು ಶಾಲಾನುದಾನವನ್ನು ನಿರ್ವಹಣೆ ಮಾಡುವ ಬಗ್ಗೆ.

**ಉಲ್ಲೇಖ:** 1.ಉಪನಿರ್ದೇಶಕರು (ಆ), ಉಡುಪಿ ರವರ ಪತ್ರ ಸಂಖ್ಯೆ: ಸ.ಶಿ.ಅ/ಉ.ಪ್ರೌ.ಶಾಲೆ/ಶಾ.ಅನುದಾನ/01/2020-21 ದಿನಾಂಕ 04.12.2020.
2. ಕರ್ನಾಟಕ ರಾಜ್ಯ ಪತ್ರ ವಿಶೇಷ ರಾಜ್ಯ ಪತ್ರಿಕೆ ಸಂಖ್ಯೆ ಇಡಿ 709 ಪಿಜಿಸಿ ಬೆಂಗಳೂರು ದಿನಾಂಕ 07.03.2018.

**********

ವಿಷಯಕ್ಕೆ ಸಂಬಂಧಪಟ್ಟಂತೆ 2020-21ನೇ ಸಾಲಿನಲ್ಲಿ ಪ್ರಾಥಮಿಕ ಮತ್ತು ಪ್ರೌಢಶಾಲೆಗಳು ಒಂದೇ ಭೌಗೋಳಿಕ ಸ್ಥಳದಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದರೆ ಉಲ್ಲೇಖ-2ರಲ್ಲಿ ಪ್ರಸ್ತಾಪಿಸಿರುವಂತೆ ಅಂತಹ ಶಾಲೆಗೆ ಒಂದೇ ಯು-ಡೈಸ್ ಸಂಖ್ಯೆಯಿರುತ್ತದೆ. ಹಾಗೆಯೇ ಪ್ರಾಥಮಿಕ ಮತ್ತು ಪ್ರೌಢಶಾಲಾ ಒಟ್ಟು ವಿದ್ಯಾರ್ಥಿಗಳ ಸಂಖ್ಯೆಗನುಗುಣವಾಗಿ ಶಾಲಾನುದಾನವನ್ನು ಪ್ರೌಢಶಾಲಾ ಎಸ್‌ಡಿಎಂಸಿ ಖಾತೆಗೆ ಅನುದಾನ ಬಿಡುಗಡೆಗೊಳಿಸಲಾಗಿರುತ್ತದೆ. ಪ್ರೌಢಶಾಲಾ ಮುಖ್ಯ ಶಿಕ್ಷಕರು ಪ್ರಾಥಮಿಕ ಶಾಲಾ ನಿರ್ವಹಣೆಗೆ ಅನುದಾನದ ಮಿತಿಯಲ್ಲಿ ಬೇಡಿಕೆಯನ್ನು ಪಡೆದು ಪ್ರಾಥಮಿಕ ಶಾಲೆಗೆ ವಸ್ತುಗಳನ್ನು ಖರೀದಿಸಿ ನೀಡುವುದು ಆದರೆ ಖರ್ಚುವೆಚ್ಚದ ಬಗ್ಗೆ ರಸೀದಿಗಳನ್ನು ಹಾಗೂ ನಗದು ಪುಸ್ತಕವನ್ನು ಪ್ರೌಢಶಾಲಾ ಮುಖ್ಯ ಶಿಕ್ಷಕರು ನಿರ್ವಹಣೆ ಮಾಡುವುದು.

ಅಪರ ನಿರ್ದೇಶಕರು (ಕಾರ್ಯಕ್ರಮಗಳು)
ಸಮಗ್ರ ಶಿಕ್ಷಣ-ಕರ್ನಾಟಕ
ಬೆಂಗಳೂರು

**ಪ್ರತಿಯನ್ನು ಅಗತ್ಯ ಕ್ರಮಕ್ಕಾಗಿ:**

1. ಸಂಬಂಧಪಟ್ಟ ಉಪನಿರ್ದೇಶಕರು (ಆ) ಮತ್ತು (ಅಭಿವೃದ್ಧಿ), ಸಾ.ಶಿ.ಇ.
2. ಸಂಬಂಧಪಟ್ಟ ಕ್ಷೇತ್ರ ಶಿಕ್ಷಣಾಧಿಕಾರಿಗಳು, ಸಾ.ಶಿ.ಇ.
3. ಸಂಬಂಧಪಟ್ಟ ಮುಖ್ಯ ಶಿಕ್ಷಕರು, ಸರ್ಕಾರಿ ಪ್ರೌಢ ಶಾಲೆ.
4. ಕಛೇರಿ ಪ್ರತಿ.